ಶ್ರೀ ಕೆ. ರಾಮಭಟ್.—ಲೋಕಲ್ ಬಾಡೀಸ್‌ನಿಂದ ಈಗಾಗಲೇ ಟ್ಯಾಕ್ಸನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಈ ಪ್ರೊಫೆಷನ್ ಟ್ಯಾಕ್ಸ್ ಹಾಕುವುದರಿಂದ ಡಬಲ್ ಟ್ಯಾಕ್ಸೇಷನ್ ಆಗುವುದಿಲ್ಲವೇ? ಇದು ಎಗೆನೆಸ್ಟ್ ಟು ದಿ ಪಾಲಿಸಿ ಆಲ್ಲವೇ ?

SRI M. VEERAPPA MOILY.—Article 276 of the Constitution empowers the State to levy tax on professions trades, callings empolyments. It is fully covered under the constitutional powers.

ಶ್ರೀ ಪಿ. ರಾಮದೇವ್.—ಮುನಿಸಿಪಾಲಿಟಿ ಕಾರ್ಪೋರೇಷನ್ ತಾಲ್ಲೂಕು ಬೋರ್ಡ್‌ಗಳು ಈ ಕಡೆಗಳಲ್ಲೆಲ್ಲಾ ಆಕ್ಟ್ರಾಯಿಯಂನ್ನು ತೆಗೆದು ಹಾಕಿದ್ದಾರೆ. ಅವರಿಗೆ ಈಗ ಕೆಲಸವಿಲ್ಲ. ಆದ್ದರಿಂದ ಈ ಪ್ರೊಫೆಷನಲ್ ಟ್ಯಾಕ್ಸ್‌ನ್ನು ವಸೂಲು ಮಾಡತಕ್ಕ ಜವಾಬ್ದಾರಿಯನ್ನು ಏತಕ್ಕೆ ಈ ಕಾರ್ಪೋರೇಷನ್ ಮುನಿಸಿಪಾಲಿಟಿಗಳಿಗೆ ಕೊಡಬಾರದು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಹಿಂದೆ ಈ ಮುನಿಸಿಪಾಲಿಟಿ ಕಾರ್ಪೋರೇಷನ್ ತಾಲ್ಲೂಕು ಬೋರ್ಡ್‌ಗಳು ಎಲ್ಲಾ ಸಂಸ್ಥೆಗಳು ಸೇರಿ ಒಂದು ವರ್ಷಕ್ಕೆ ೫ ಲಕ್ಷ ರೂಪಾಯಿಗಳನ್ನು ಮಾತ್ರ ಈ ಪ್ರೊಫೆಷನಲ್ ಟ್ಯಾಕ್ಸ್ ಮುಖಾಂತರ ವಸೂಲು ಮಾಡುತ್ತಿದ್ದರು. ಆದರೆ ಅದು ಸಮರ್ಪಕವಾಗಿ ವಸೂಲು ಮಾಡುವುದಕ್ಕೆ ಆಗುವುದಿಲ್ಲ ಎಂದು ಅನುಭವದಿಂದ ಕಂಡು ಬಂದದ್ದರಿಂದ ಇದನ್ನು ಹೆಚ್ಚು ಹಣ ವಸೂಲು ಮಾಡುವುದು ಮತ್ತು ಅದನ್ನು ಸಮರ್ಪಕವಾಗಿ ಹೆಚ್ಚು ಪರಿಣಾಮಕಾರಿಯಾಗಿ ವಸೂಲು ಮಾಡಬೇಕು ಎನ್ನುವ ದೃಷ್ಟಿಯಿಂದ ಸರ್ಕಾರದವರೆ ವಸೂಲು ಮಾಡುತ್ತಿದ್ದಾರೆ.

## Strength of Vehicles in Shimoga District

695 SRI L. T. THIMMAPPA HEGDE (Sagar).—Will the Minister for Transport and Minor Irrigation be pleased to state,—

(a) the total number of vehicles in all taluks of Shimoga district and whether it has come to the notice of Government that the district R.T.O's Office is far away from all the taluk head quarters ;

(b) since this office is situated for away place, whether representation have been received for opening a sub-office ; If so, the action taken by the Government ;

(c) while opening a sub-office, how the preference will be given;

(d) since Sagar sub-division is centrally situated, whether this place will be considered for opening a sub-divisional office ?

SRI M. M. J. SADYOJATHA (Minister for Transport and Minor Irrigation),—

(a) The total number of vehicles in Shimoga district as on 31st January 1981 is as follows.—

| Taluk | No. of vehicles |
|---|---|
| Bhadravathi | 3398 |
| Channageri | 886 |
| Honnali | 836 |
| Hosanagara | 562 |

| | |
|---|---|
| Sagara | 1735 |
| Shikaripura | 632 |
| Shimoga | 6176 |
| Soraba | 315 |
| Thirthalli | 684 |
| | 15,224 |

The Regional Transport Office is in the heart of the City of Shimoga. It is not far away from the town. (It is within the premises of District Office.)

(b) 1. This office is in the middle of the town.

2. No representations have been received.

3. The Government is considering for opening sub-office in all places of the State wherever it is possible.

(c) Normally preference will be given to open sub-office in the sub-division of the district. After taking into consideration, the number of vehicles in the taluks of that sub-division, population, industries and the distance from the district office etc, sub-offices will be opened.

(d) When the occasion arises for opening sub-office in other sub-divisions, the question of opening a sub-regional transport office at Sagar sub-division will be considered.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಡೆ.—ಸ್ವಾಮಿ ನಾನು ನನ್ನ ಪ್ರಶ್ನೆಯಲ್ಲಿ ಈ ಸಾಗರ ಸಬ್ ಡಿವಿಜನ್ ಕೇಂದ್ರವಾದ್ದರಿಂದ ಇಲ್ಲಿ ಬಂದು ಉಪವಿಭಾಗ ಕಚೇರಿಯನ್ನು ತೆರೆಯುವ ಬಗ್ಗೆ ಪರಿಶೀಲಿಸಲಾಗುವುದೇ ಎಂದು ಕೇಳಿದ್ದಕ್ಕೆ ಪ್ರಾದೇಶಿಕ ಸಾರಿಗೆ ಕಛೇರಿ ಶಿವಮೊಗ್ಗ ನಗರದ ಮಧ್ಯಭಾಗದಲ್ಲಿದೆ ಊರಿಗೆ ಬಹಳ ದೂರದಲ್ಲಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ ಇದು ಸರಿಯೇ ?

†ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಮಾನ್ಯ ಸದಸ್ಯರಿಗೆ ಏನು ಬೇಕು ಎಂದು ಕೇಳಿದರೆ ಅದನ್ನು ಪರಿಶೀಲನೆ ಮಾಡಬಹುದು.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಡೆ.—ಶಿವಮೊಗ್ಗ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕು ಕೇಂದ್ರಗಳಿಗೂ ಜಿಲ್ಲಾ ಆರ್.ಟಿ.ಓ. ಕಚೇರಿ ದೂರದಲ್ಲಿದೆ. ಅವಕ್ಕೋಸ್ಕರವಾಗಿ ಸಾಗರದಲ್ಲಿ ಒಂದು ಉಪವಿಭಾಗದ ಸಾರಿಗೆ ಕಚೇರಿಯನ್ನು ತೆರೆಯುವ ಬಗ್ಗೆ ಸರ್ಕಾರ ಪರಿಶೀಲಿಸಲಾಗುವುದೇ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಡೆ.—ಬೇರೆ ವಿಭಾಗಗಳಲ್ಲಿ ಉಪಕಛೇರಿಗಳನ್ನು ತೆರೆಯಂವ ಸಂದರ್ಭ ಬಂದಾಗ ಸಾಗರ ಉಪವಿಭಾಗದಲ್ಲಿ ಉಪಸಾರಿಗೆ ಕಛೇರಿಯನ್ನು ತೆರೆಯುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ ಅದಕ್ಕಾಗಿ ನಾನು ಕೇಳುತ್ತಿದ್ದೇನೆ ಸಾಗರ ಸಬ್ ಡಿವಿಜನ್ ಕೇಂದ್ರವಾದ್ದರಿಂದ ಇಲ್ಲಿ ಒಂದು ಉಪವಿಭಾಗ ಕಛೇರಿಯನ್ನು ತೆರೆಯುವ ಬಗ್ಗೆ ಪರಿಶೀಲಿಸಲಾಗುವುದೇ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಇದರ ಬಗ್ಗೆ ಅಂಕಿ ಅಂಶಗಳನ್ನು ಒದಗಿಸಬೇಕೆಂದು ಟ್ರಾನ್ಸ್‌ಪೋರ್ಟ್ ಕಮಿಶನರ್‌ರವರನ್ನು ಕೇಳಿದ್ದೇವೆ ಅದು ಅವರಿಂದ ಬಂದ ನಂತರ ನಾವು ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಎಂ. ಶೀನ್ನಾಳಿ ಚಂದ್ರಶೇಖರ್,—ಮಾಡುತ್ತೇನೆ ಎಂದು ಹೇಳುತ್ತೀರಿ ಆದರೆ ಯಾವಾಗ ಮಾಡುತ್ತೇನೆ ಎಂದು ಹೇಳುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ವರದಿ ಬಂದ ನಂತರ ಸೂಕ್ತವಾದ ಕ್ರಮ ತೆಗೆದು ಕೊಳ್ಳುತ್ತೇನೆ,

**Demands of the employees of the Karnataka State Khadi and Village Industries Board.**

710 SRI G.K. TAKKED.—(Parasagad) Will the Minister for Small Scale Industries and Sericulture be pleased to state.—

(a) whether Government is aware of the several demands put forth by the employees of the Khadi and Village Industries Board in regard to the extension of service and pensionary benefits and other facilities to them on par with the Government employees ;

(b) whether it is not a fact that the Government had promised to look into the matter and to consider the demands sympathetically ;

(c) if so, the action taken by the Government so far in this regard ?

SMT. RENUKA RAJENDRAN (Minister for Small Scale Industries and Sericulture).—

(a) Yes.

(b) Yes.

(c) The demands of the employees for extension of benefit of pension and gratuity and other benfits as applicable to the employees of the State Government are under active consideration of the Government. Financial implication involved in this regard have been worked out and comparative study of the pensionary benefits both under the State Government and LIC Group Insurance Scheme is being examined for taking a decision.

ಶ್ರೀ ಜಿ.ಕೆ. ತಕ್ಕೇಡ್.—ಈ ಖಾದೀ ಬೋರ್ಡ್ ಹುಟ್ಟಿದಾಗಿನಿಂದಲೂ ಹಿಡಿದು ಇದುವರೆವಿಗೂ ಕರ್ನಾಟಕ ರಾಜ್ಯದಲ್ಲಿ ಖಾದೀ ಮತ್ತು ಗ್ರಾಮೋದ್ಯೋಗ ಮಂಡಳಿಯ ನೌಕರರಿಗೆ ನಿವೃತ್ತಿ ವೇತನ ಗ್ರಾಚುಟಿ ಮತ್ತು ಭತ್ಯ ಮತ್ತು ಇತರ ಸೌಲಭ್ಯಗಳು ಹಾಗೂ ಹರಿಜನಗಿರಿಜನರಿಗೆ ಕೊಡಬೇಕಾದಂತಹ ವಿಶೇಷಾತಿ ಇತ್ಯಾದಿಗಳನ್ನು ಒದಗಿಸುವ ಬಗ್ಗೆ ಭರವಸೆಯನ್ನು ಕೊಡುತ್ತೀರಾ ? ಇದುವರೆವಿಗೂ ಅವರಿಗೆ ಈ ಯಾವ ಸೌಲಭ್ಯವನ್ನು ಕೊಡದೆ ಇರುವುದಕ್ಕೆ ಕಾರಣವೇನು. ಎಷ್ಟು ದಿವಸಗಳಲ್ಲಿ ಕೊಡುತ್ತೀರಾ ?

† ಶ್ರೀಮತಿ ರೇಣುಕಾ ರಾಜೇಂದ್ರನ್.—ಮಾನ್ಯ ಸದಸ್ಯರು ಕೇಳಿದಂತಹ ಬೇಡಿಕೆಗಳು ಏನೇ ಆವುಗಳ ಬಗ್ಗೆ ಖಾದೀ ಹಾಗೂ ಗ್ರಾಮೀಣ ಕೈಗಾರಿಕೆಯ ಮಂಡಳಿಯ ನೌಕರರ ಯೂನಿಯನ್‌ರವರು ಕಳೆದ ವರ್ಷ ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದಿದ್ದರು. ಅವರು ಸುಮಾರು ೧೩ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದರು. ಆದರಲ್ಲಿ ನಾವು ೭ ಬೇಡಿಕೆಗಳನ್ನು ಪರಿಶೀಲನೆ ಮಾಡಿದ್ದೇವೆ. ಉಳಿದ ಬೇಡಿಕೆಗಳನ್ನು ಹಂತಹಂತವಾಗಿ ಪರಿಶೀಲನೆ ಮಾಡುವವರಿದ್ದೇವೆ. ಈಗ ಅದನ್ನೆಲ್ಲ ಲಿಸ್ಟ್ ಮಾಡಿ ಹೇಳುವುದಕ್ಕೆ ಆಗುವುದಿಲ್ಲ. ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ಪೆನ್‌ಷನ್ ಗ್ರಾಚುಟಿ ಇವುಗಳನ್ನು